**ದಿಃ 25.03.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು :–ಆರೋಪಿ ಪರ ಶ್ರೀ ಆರ್.ಇ ವಕೀಲರಿಂದ :–**

10. ಸಂಜೆ 6.30 ರ ವೇಳೆ ನಾನು ಭಾಗ್ಯಲಕ್ಷ್ಮೀ ಅವರಿಗೆ ಫೋನ್ ಮಾಡಿದಾಗ ಫೋನ್ ಸ್ವಿಚ್ ಆಫ್ ಆಗಿತ್ತು. ಚಾಸಾ–1 ಅವರಿಗೆ ಫೋನ್ ಮಾಡಿದಾಗ ಮನೆಯ ಹೊರಗೆ ಶಬ್ದ ಆಗುವುದನ್ನು ಕೇಳಿ ಭಾಗ್ಯಲಕ್ಷ್ಮೀ ಬಂದಿದ್ದರು ಎಂದು ಹೇಳಿದರು ಎಂದು ನಾನು ಸಾಕ್ಷಿ ಕಾಲದಲ್ಲಿ ಮಾತ್ರ ಹೇಳಿದ್ದೇನೆ ಮತ್ತು ಹೇಳಿಕೆ ಕಾಲದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಸದರಿ ಸಾಕ್ಷಿ ಹೇಳಿಕೆಯನ್ನು ನ್ಯಾಯಾಧೀಶರ ಸಮಕ್ಷಮ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿ ನಮಗೆ ಎದುರಿನಲ್ಲಿ ಗಾಭರಿಯಿಂದ ನಡೆದುಕೊಂಡು ಬರುತ್ತಿದ್ದು ಸೈಕಲ್ ಇರಲಿಲ್ಲ, ನಾವು ಬ್ಯಾಟರಿ ಬೆಳಕನ್ನು ಆರೋಪಿಯ ಕಡೆಗೆ ಮಾಡಿದಾಗ ಆತನು ಪಕ್ಕಕ್ಕೆ ಹೋಗಿ ಕುಳಿತುಕೊಂಡಿದ್ದನು. ನಾನು ನೋಡಿದಾಗ ಆರೋಪಿ ಹಾಕಿದ ಬಟ್ಟೆ ತೇವ ಆಗಿತ್ತು ಎಂದು ನಾನು ಸಾಕ್ಷಿ ಕಾಲದಲ್ಲಿ ಮಾತ್ರ ಹೇಳಿದ್ದೇನೆ ಮತ್ತು ಹೇಳಿಕೆ ಕಾಲದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಸದರಿ ಸಾಕ್ಷಿ ಹೇಳಿಕೆಯನ್ನು ನ್ಯಾಯಾಧೀಶರ ಸಮಕ್ಷಮ ಹೇಳಿಲ್ಲ ಎಂದರೆ ಸರಿಯಲ್ಲ.

11. ದಿಃ 26.08.2021 ರಂದು ಶವ ಇದ್ದ ಸ್ಥಳದಲ್ಲಿ ನಾನು ಇರಲಿಲ್ಲ ಮತ್ತು ನಾನು ಹೇಳಿದಂತೆ ಯಾವುದೇ ವಸ್ತುಗಳನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ನಿಪಿ–3 ರಿಂದ ನಿಪಿ–11 ರ ಫೋಟೋಗಳಲ್ಲಿ ನಾನು ಕಂಡು ಬರುವುದಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳದಲ್ಲಿ ಇರದೇ ಇದ್ದರೂ ಸಹ ನನ್ನ ಮತ್ತು ಮೃತ ಭಾಗ್ಯಲಕ್ಷ್ಮೀ ಅನೈತಿಕ ಸಂಬಂಧ ಕಾರಣ ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಚಾಸಾ–1 ಅವರ ನಡುವೆ ಇದ್ದ ಪ್ರೀತಿ ಪ್ರೇಮದ ವಿಚಾರ ನನಗೆ ಮತ್ತು ಗ್ರಾಮಸ್ಥರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಆರೋಪಿ ಮತ್ತು ಚಾಸಾ–1 ಅವರ ನಡುವೆ ಇದ್ದ ಪ್ರೀತಿ ಪ್ರೇಮದ ವಿಚಾರವಾಗಿ ನಾನು ವಿರೋದ ಮಾಡಿದ ಕಾರಣ ಗ್ರಾಮದಲ್ಲಿ ಪಂಚಾಯ್ತಿ ಮಾಡಿದ ವೇಳೆ ನನ್ನ ಮತ್ತು ಭಾಗ್ಯಲಕ್ಷ್ಮೀ ಅವರ ನಡುವೆ ಇದ್ದ ಅನೈತಿಕ ಸಂಬಂಧ ತಿಳಿಸಿದ ಕಾರಣ ನಾನು ಆರೋಪಿ ಮೇಲಿನ ದ್ವೇಷದಿಂದ ಅವರ ವಿರುದ್ಧ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

12. ಭಾಗ್ಯಲಕ್ಷ್ಮೀ ಊರಿನಿಂದ ಹೊರಗೆ ಹೋದಾಗ 15 ದಿನಗಳ ಕಾಲ ವಾಪಸ್ಸು ಬರುತ್ತಿರಲಿಲ್ಲ ಮತ್ತು ಸದರಿ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಎಲ್ಲಾ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದ್ದರು ಸಹ ಆರೋಪಿಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :-ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು.

**ದಿಃ 01.02.2021 ರಂದು ಸಾಕ್ಷಿಯನ್ನು ಮಧ್ಯಾಹ್ನ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲು :- ಆರೋಪಿ ಒಂದು ಮತ್ತು ಎರಡನೇ ಪರ ವಕೀಲರಿಂದ :-**

ದಿಃ 19.08.2017 ರಂದು ನಾನು ತನಿಖೆ ಸಂಬಂಧ ಕರೋಹಟ್ಟಿ ಗ್ರಾಮಕ್ಕೆ ಭೇಟಿ ಕೊಟ್ಟಾಗ ನಜುಂಡ ಸ್ವಾಮಿ, ಗುರುಸ್ವಾಮಿ ಮತ್ತು ಮಲ್ಲಣ್ಣ ಹಾಜರು ಇದ್ದರು ಎಂದರೆ ನಾನು ಗಮನಿಸಿರುವುದಿಲ್ಲ. ಶವ ಸಿಕ್ಕ ನಂತರ ಫ್ರಾಸಾ-1 ಮತ್ತು ಫ್ರಾಸಾ-5 ರವರು ತಾವು ಕರೋಹಟ್ಟಿ ಗ್ರಾಮಕ್ಕೆ ಬಂದ ನಂತರ ಅವರು ಊರಲ್ಲಿ ಯಾರನ್ನು ಅಥವಾ ಅವರ ಸಂಬಂಧಿಕರನ್ನು ವಿಚಾರಿಸಿದ್ದಾರೆ ಎನ್ನುವುದು ನನಗೆ ತಿಳಿಸಿಲ್ಲ.

ದಿಃ 21.08.2017 ರಂದು ಚಾಸಾ-1 ಮತ್ತು ಚಾಸಾ-4 ರವರನ್ನು ಕರೆದು ಪಂಚನಾಮೆ ಮಾಡುವಾಗ ಮುದ್ದೆ ಮಾಲು ಲುಂಗಿ ಮತ್ತು ಚಪ್ಪಲಿ ಸಾಕ್ಷಿದಾರರಿಗೆ ಗುರುತಿಸಲು, ತೋರಿಸಿದ್ದು ಸದರಿ ಸಾಕ್ಷಿದಾರರಿಗೆ ಸದರಿ ವಸ್ತುಗಳನ್ನು ತೋರಿಸಲು ಮಾನ್ಯ ಮ್ಯಾಜೀಸ್ಟ್ರೇಟ ರವರ ಅನುಮತಿ ಪಡೆದುಕೊಂಡಿರುವುದಿಲ್ಲ. ದಿಃ 21.08.2017 ರಂದು ಲುಂಗಿ ಮತ್ತು ಚಪ್ಪಲಿ ಸಾಕ್ಷಿದಾರರಿಗೆ ತೋರಿಸಿ ಗುರುತಿಸಿದ ಬಗ್ಗೆ ಪಂಚನಾಮೆಯನ್ನು ಮಾಡಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿದಾರರಿಗೆ ನಾನು ವಸ್ತುಗಳನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿತಳು ತನಗೆ ಮತ್ತು ತನ್ನ ಕುಟುಂಬದವರಿಗೆ ಜೀವದ ಬೆದರಿಕೆ ಹಾಕುತ್ತಿದ್ದಾರೆ ಎಂದು ತನಿಖೆ ವೇಳೆ ಪಿರ್ಯಾಧಿ ಕೊಟ್ಟಿದ್ದಳು ಎಂದರೆ ನನಗೆ ನೆನಪಿಲ್ಲ. ಸದರಿ ವಿಷಯ ಪಿ.ಎಸ್.ಐ ನನ್ನ ಗಮನಕ್ಕೆ ತಂದಿದ್ದರು ಎಂದರೆ ನನಗೆ ನೆನಪಿಲ್ಲ.

ದಿಃ 17.07.2018 ರವರೆಗೆ ಪೋಟೋಗ್ರಾಫರಗಳು ಪೋಟೋ ತೆಗೆದ ಮೆಮೋರಿ ಚಿಪ್ಪು ನನ್ನ ಹತ್ತಿರ ಇದ್ದವು ಎಂದರೆ ಸರಿಯಲ್ಲ. ಸಾಕ್ಷಿ ವಿಚಾರಣೆ ಆದ ನಂತರ ಮೆಮೋರಿ ಚಿಪ್ಪನಲ್ಲಿರುವ ಎಲ್ಲಾ ಪೋಟೋಗಳನ್ನು ಡಿಲೀಟ್ ಮಾಡಿದ್ದೇನೆ ಎಂದು ಪೋಟೋಗ್ರಾಫರಗಳಿಂದ ಕಲಂ 65 ಬಿ ರಡಿಯಲ್ಲಿನ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿದಾರರಾದ ನಜುಂಡ ಸ್ವಾಮಿ, ಮಲ್ಲಣ್ಣ ಮತ್ತು ಗುರುಸ್ವಾಮಿ, ಚಾಸಾ-2 ರಿಂದ ಚಾಸಾ-4 ಈ ಪ್ರಕರಣದ ಸಾಕ್ಷಿದಾರರು ಎಂದು ನಿಮಗೆ ಯಾರಿಂದ ಗೊತ್ತಾಯಿತು ಎಂದು ಕೇಳಿದ್ದಕ್ಕೆ ಸಾಕ್ಷಿಯು ಬಾತ್ಮಿದಾರರಿಂದ ಗೊತ್ತಾಯಿತು ಎಂದು ಹೇಳುತ್ತಾರೆ. ಪಂಚತಾಯಮ್ಮ ಮತ್ತು ಪ್ರವೀಣ ಕುಮಾರ್ ಇವರು

ತಮ್ಮ ಹೇಳಿಕೆಯ ದಾಖಲಿಸುವ ಕಾಲದಲ್ಲಿ ಚಾಸಾ-2 ರಿಂದ ಚಾಸಾ-4 ಈ ಕೇಸಿನ ಸಾಕ್ಷಿದಾರರು ಎಂದು ನನ್ನ ಮುಂದೆ ಹೇಳಿರುವುದಿಲ್ಲ.

ಮೃತನ ತಾಯಿ ಶವವನ್ನು ಗುರುತಿಸಿದರಿಂದ ಮತ್ತು ಮಿಸಿಂಗ್ ಕಂಪ್ಲೇಟ್ ನಲ್ಲಿ ಬರೆದ ವಿವರಗಳಿಗೆ ಶವವು ಹೋಲಿಕೆ ಆಗಿದ್ದರಿಂದ ಶವವನ್ನು ಡಿ.ಎನ್.ಎ ಪರೀಕ್ಷೆಗೆ ಒಳಪಡಿಸಿರುವುದಿಲ್ಲ. ಆ ಸಮಯಕ್ಕೆ ಮೃತನ ಮಕ್ಕಳು ಅವರ ಅಜ್ಜಿಯ ಮನೆಯಲ್ಲಿ ಇದ್ದರು. ಮೃತನ ಮಕ್ಕಳು ಇರುವ ಅವರ ಅಜ್ಜಿಯ ಮನೆಯು ನಮ್ಮ ಠಾಣೆಯಿಂದ 20 ಕೀ.ಮೀ ಇರುತ್ತದೆ. ಮಿಸಿಂಗ್ ಕಂಪ್ಲೇಟ್ ನಲ್ಲಿ ಕಾಣೆಯಾದ ವ್ಯಕ್ತಿಯ ಉದ್ದ 5 ಅಡಿ ಎಂದು ಬರೆದಿದೆ ಎಂದು ಕೇಳಿದ್ದಕ್ಕೆ ಸಾಕ್ಷಿಯು ವಿಷಯವನ್ನು ಮರೆಮಾಚಲು ಕೊಟ್ಟಿರಬಹುದು ಎಂದು ಹೇಳುತ್ತಾರೆ. 1 ನೇ ಆರೋಪಿತಳು ಶವವನ್ನು ಪೋಟೋವನ್ನು ನೋಡಿ ಶವವನ್ನು ಗುರುತಿಸಿರುತ್ತಾಳೆ ಮತ್ತು ತಪ್ಪು ಒಪ್ಪಿಕೊಂಡಿರುತ್ತಾಳೆ. 1 ನೇ ಆರೋಪಿತಳಿಗೆ ಮೃತನ ಪೋಟೋ ತೋರಿಸಿದ್ದಾಗ ಅವಳು ಆತನನ್ನು ಗುರುತಿಸಿದ್ದಾಳೆ ಎಂದು ನಾನು ಡೈರಿಯಲ್ಲಿ ಬರೆದಿರುವುದಿಲ್ಲ. ಫ್ರಾಸಾ-2 ನನ್ನ ಮುಂದೆ ನಿಪಿ-10 ರಿಂದ ನಿಪಿ-12 ರಂತೆ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಫ್ರಾಸಾ-4 ಮಲ್ಲಣ್ಣ ನನ್ನ ಮುಂದೆ ನಿಪಿ-16 ರಂತೆ ಹೇಳಿಕೆಯನ್ನು ಕೊಟ್ಟಿರುತ್ತಾರೆ ಎಂದರೆ ಸರಿ ಇದೆ. ಫ್ರಾಸಾ-4 ನನ್ನ ಮುಂದೆ ನಿಪಿ-17 ರಂತೆ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಮ್ಯಾನವಲ್ ಅನುಸರಿಸಿ ಯಾವುದೇ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ.

ಫ್ರಾಸಾ-1 ಪಂಚತಾಯಮ್ಮ, ನಾನು ಬೆಂಗಳೂರಿನಿಂದ ಮನೆಗೆ ಬಂದಾಗ ಮೊಮ್ಮಕ್ಕಳು ಮನೆಯಲ್ಲಿ ಇರಲಿಲ್ಲ, ನಾನು ಬೆಂಗಳೂರಿಗೆ ಹಬ್ಬಕ್ಕೆ ಹೋಗುವ ಮೊದಲೇ ಮೊಮ್ಮಕ್ಕಳನ್ನು, ಮೀನಾಕ್ಷಿ ತನ್ನ ತಾಯಿಯ ಮನೆಗೆ ಕಳುಹಿಸಿದ್ದಳು ಎಂದು ಮುಂದುವರೆದು ಹೇಳಿಕೆಯಲ್ಲಿ ಫ್ರಾಸಾ-1 ನನ್ನ ಮುಂದೆ ಹೇಳಿಲ್ಲ ಎಂದರೆ ಸರಿ ಇದೆ. ಸದರಿ ವಿಷಯವು ಫ್ರಾಸಾ-1 ಪಂಚತಾಯಮ್ಮ ಕೊಟ್ಟ ದೂರಿನಲ್ಲಿ ನಮೂದು ಇಲ್ಲ ಎಂದರೆ ಸರಿ ಇದೆ.

ಫ್ರಾಸಾ–1 ನನ್ನ ಮುಂದೆ ಹೇಳಿಕೆ ಕೊಡುವಾಗ ಮೀನಾಕ್ಷಿ ಆಗಲಿ, ಆಕೆಯ ತವರು ಮನೆಯವರಾಗಲಿ ಶವ ಸಂಸ್ಕಾರಕ್ಕೆ ಬಂದಿಲ್ಲ, ಮೊಮ್ಮಕ್ಕಳು ಸಹ ಶವ ಸಂಸ್ಕಾರಕ್ಕೆ ಬಂದಿಲ್ಲ, ಹಾಗೂ ಉಮೇಶನ ಶವ ಸಿಕ್ಕ ಮೇಲೆ ಆರೋಪಿಗಳು ಇಬ್ಬರು ಶವವನ್ನು ನೋಡಲು ಬಂದಿಲ್ಲ ಎಂದು ಹೇಳಿಕೆಯನ್ನು ಕೊಟ್ಟಿಲ್ಲ ಎಂದು ಕೇಳಿದ್ದಕ್ಕೆ ಸಾಕ್ಷಿಯು ಅವರ ಹೇಳಿಕೆಯಲ್ಲಿ ಆ ಅಂಶ ಇಲ್ಲ ಎಂದು ಹೇಳುತ್ತಾರೆ. ಸದರಿ ಫ್ರಾಸಾ–1 ಉಮೇಶ ಈತನು ಸಾಯುವ ಮೊದಲು ಯಾವ ಬಣ್ಣದ ಬಟ್ಟೆಯು ಹಾಕಿಕೊಂಡಿದ್ದನು ಎಂದು ನಿಮ್ಮ ಮುಂದೆ ಹೇಳಿಲ್ಲ ಎಂದು ಕೇಳಿದ್ದಕ್ಕೆ ಸಾಕ್ಷಿಯು ಸದರಿ ಫ್ರಾಸಾ–1 ರವರು ಘಟನೆಗಿಂತ 3–4 ದಿವಸಗಳ ಹಿಂದೆ ಊರಿಗೆ ಹೋಗಿದ್ದರಿಂದ ಸದರಿ ವಿಷಯವನ್ನು ಹೇಳಿಲ್ಲ ಎಂದು ಹೇಳುತ್ತಾರೆ. ಉಮೇಶನ ಮಕ್ಕಳು ಊರಿಗೆ ಹೋಗಿದ್ದರು ಎಂದು ಫ್ರಾಸಾ–2 ತನ್ನ ಹೇಳಿಕೆಯಲ್ಲಿ ನನ್ನ ಮುಂದೆ ಹೇಳಿರುವುದಿಲ್ಲ.

ಫ್ರಾಸಾ–2 ತಮ್ಮ ಹೇಳಿಕೆಯಲ್ಲಿ ಕೈಯಲ್ಲಿ ಮಚ್ಚೆ ಇತ್ತು ಮತ್ತು ದೇಹದ ಮೇಲೆ ಕರಡಿಗೆ ಇತ್ತು ಎಂದು ನನ್ನ ಮುಂದೆ ಹೇಳಿಲ್ಲ ಎಂದರೆ ಸರಿ ಇದೆ. ಫ್ರಾಸಾ–2 ರವರು ತಮ್ಮ ಹೇಳಿಕೆಯಲ್ಲಿ ಶವ ಸಿಕ್ಕ ಸ್ಥಳದ ಹತ್ತಿರ ಸಾಕಷ್ಟು ಜನ ಬಂದಿದ್ದರಿಂದ ಆರೋಪಿಗಳು ಅಲ್ಲಿಗೆ ಬಂದಿರುವುದನ್ನು ನಾನು ಗಮನಿಸಿಲ್ಲ, ಶವ ಸಂಸ್ಕಾರಕ್ಕೆ ಅವರು ಬಂದಿರಲಿಲ್ಲ ಎಂದು ನಿಮ್ಮ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದು ಕೇಳಿದ್ದಕ್ಕೆ ಸಾಕ್ಷಿಯು ಮೃತನ ಶವ ಸಿಕ್ಕಿದ್ದು, ಗೊತ್ತಾದ ತಕ್ಷಣ ಆರೋಪಿಗಳು ತಲೆ ಮರೆಸಿಕೊಂಡಿದ್ದರು ಎಂದು ನನ್ನ ಮುಂದೆ ಹೇಳಿಕೆ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ.

ಫ್ರಾಸಾ–3 ಗುರುಸ್ವಾಮಿ ತಮ್ಮ ಹೇಳಿಕೆಯಲ್ಲಿ ನನ್ನ ಮುಂದೆ ಆ ಮನೆ ನನ್ನ ಚಿಕ್ಕಪ್ಪ ಕೆಂಪರಾಜು ರವರ ಹೆಸರಿನಲ್ಲಿ ಇದೆ ಎಂದು ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಫ್ರಾಸಾ–3 ತಮ್ಮ ಹೇಳಿಕೆಯಲ್ಲಿ ನಿಮ್ಮ ಮುಂದೆ " ಹೊರಗಡೆ ಬೀದಿ ಲೈಟು ಇತ್ತು ಅದರ ಬೆಳಕಿನಲ್ಲಿ ನಾನು ಅವರನ್ನು ನೋಡಿದ್ದೇ " ಎಂದು ಹೇಳಿಕೆ ಕೊಟ್ಟಿಲ್ಲ ಎಂದು ಕೇಳಿದ್ದಕ್ಕೆ ಸಾಕ್ಷಿಯು ನೋಡಿರುತ್ತೇನೆ ಎಂದು ಹೇಳಿರುತ್ತಾರೆ ಆದರೆ ಬೀದಿ ಲೈಟ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದು ಹೇಳುತ್ತಾರೆ. ಫ್ರಾಸಾ–3 ರವರು ನಿಡಿ–1 ರ ಪ್ರಕಾರ ಅಂದರೆ " ಮುಂಜಾನೆ ಸುಮಾರು 1 ಗಂಟೆ ಸಮಯದಲ್ಲಿ ನಾನು ಯುರಿನ್ ಪಾಸ್ ಮಾಡಲು ನಮ್ಮ ಮನೆಯಿಂದ ಹೊರಗಡೆ ಬಂದೆನು " ಎಂದು ಹೇಳಿಕೆ ಕೊಟ್ಟಿರುತ್ತಾರೆ.

ಫ್ರಾಸಾ–5 ರವರು ತಮ್ಮ ಹೇಳಿಕೆಯಲ್ಲಿ ಹುಡುಗರ ಬಗ್ಗೆ ಕೇಳಿದಾಗ ಒಂದು ವಾರದ ಮೊದಲು ತವರು ಮನೆಗೆ ಕಳುಹಿಸಿದಾಗಿ ಮೀನಾಕ್ಷಿ ಹೇಳಿದರು ಎಂದು ಸಾಕ್ಷಿ ಫ್ರಾಸಾ–5 ರವರು ನನ್ನ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ ಇದೆ. ಫ್ರಾಸಾ–5 ಉಮೇಶ್ ಈತನನ್ನು ಮಾದೇಶ್ವರ ಬೆಟ್ಟದ, ಸಾಲೂರು ಮಠದಲ್ಲಿ ನೋಡಿದ ಬಗ್ಗೆ ಆತನ ಸ್ನೇಹಿತ ಆತನಿಗೆ ತಿಳಿಸಿದ ವಿಷಯ ಅವನು ನನ್ನ ಮುಂದೆ ಹೇಳಿಕೆಯಲ್ಲಿ ಹೇಳಿದ್ದಾನೆ ಎಂದರೆ ಸರಿಯಲ್ಲ.

ಫ್ರಾಸಾ–13 ರವರು ನಿಮ್ಮ ಮುಂದೆ ದಿಃ 23.09.2017 ರಂದು ಟಿ.ನರಸೀಪುರ ಫ್ರೆಂಡ್ಸ್‌ಸ್ಟೂಡಿಯೋದ ಪ್ರಸಾದ ಎಂಬ ಛಾಯಾಗ್ರಾಹಕನಿಗೆ ನಮ್ಮ ಹ್ಯಾಡಿಕ್ಯಾಪ್ ನ ಮೆಮೋರಿ ಕಾರ್ಡ್ ನ್ನು ನೀಡಿ ನಿಪಿ–41 ರಿಂದ ನಿಪಿ–43 ರಂತೆ ಪೋಟೋಗಳನ್ನು ಪ್ರಿಟ್ ಹಾಕಿಸಿದ್ದೆ ಅವುಗಳನ್ನು ತಂದು ತನಿಖಾಧಿಕಾರಿಗೆ ನೀಡಿದ್ದೆ, ಅವುಗಳನ್ನು ಪ್ರಿಟ್ ಹಾಕಿಸಲು 50/– ರೂಪಾಯಿ ಶುಲ್ಕ ನೀಡಿದ್ದೆ, ನಂತರ ಸಿ.ಪಿ.ಐ ಕಛೇರಿಯ ಸಿಸ್ಟಮ್ ಗೆ ಮೆಮೋರಿ ಚಿತ್ರಗಳನ್ನು ವರ್ಗಾವಣೆ ಮಾಡಿ ಮೆಮೋರಿ ಕಾರ್ಡನಲ್ಲಿದ್ದ ಚಿತ್ರಗಳನ್ನು ಡಿಲೀಟ್ ಮಾಡಿದ್ದೇ ಎಂದು ನಿಮ್ಮ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದಾರಾ ಎಂದು ಕೇಳಿದ್ದಕ್ಕೆ ಸಾಕ್ಷಿಯು ಕಲಂ 65 ಬಿ ವರದಿಯಲ್ಲಿ ಹ್ಯಾಡಿಕ್ಯಾಮನಲ್ಲಿದ್ದ ಪೋಟೋಗಳನ್ನು ಫ್ರೆಂಡ್ಸ್ ಸ್ಟೂಡಿಯೋದಲ್ಲಿ ಪ್ರಿಟ್ ಹಾಕಿಸಿಕೊಂಡು ನನ್ನ ಮುಂದೆ ಹಾಜರುಪಡಿಸಿದ ಬಗ್ಗೆ ವರದಿ ಕೊಟ್ಟಿರುತ್ತಾರೆ ಎಂದು, ಮೆಮೋರಿ ಚಿಪ್ಪನಲ್ಲಿ ಇದ್ದ ಪೋಟೋಗಳು ಡಿಲೀಟ್ ಮಾಡಿದ್ದ ಬಗ್ಗೆ ನನ್ನ ಮುಂದೆ ಹೇಳಿರುವುದಿಲ್ಲ.

ಫ್ರಾಸಾ–22 ನನ್ನ ಮುಂದೆ ಉಮೇಶನ ಶವ ಇದೆ ಎಂದು ಗುರುತಿಸಿದ್ದು, ಆದರೆ ಶವದ ಮೇಲಿರುವ ಗುರುತುಗಳನ್ನು ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಶವ ಸಿಕ್ಕ ವಿಷಯ ತಿಳಿದ ನಂತರ ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶವ ಸಿಗುವುದಕ್ಕಿಂತ ಮೊದಲಿನಿಂದಲೇ ಆರೋಪಿತರು ನಮ್ಮ ಕಸ್ಟಡಿಯಲ್ಲಿ ಇದ್ದರು ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ – ಇಲ್ಲ</u>**

(ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು.